# ಶಾಕುಂತಲೆ ಸಿನಿಮಾಸ್...



■ ಸುಮಲತಾ ಎನ್.

'ವಾಸ್ತು ಪ್ರಕಾರ' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟ ನಟಿ ಐಶಾನಿ ಶೆಟ್ಟಿ, 'ನಡುವೆ ಅಂತರವಿರಲಿ' ಸಿನಿಮಾದ 'ಶಾಕುಂತಲೆ ಸಿಕ್ಕಳು' ಹಾಡಿನಿಂದಾಗಿ 'ಶಾಕುಂತಲೆ' ಎಂದೇ ಫೇಮಸ್ ಆದವರು. ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸಿರುವ ಅವರೀಗ ತಮ್ಮದೇ ನಿರ್ಮಾಣ ಸಂಸ್ಥೆ ಆರಂಭಿಸಿದ್ದು, ಅದಕ್ಕೆ 'ಶಾಕುಂತಲೆ ಸಿನಿಮಾಸ್' ಎಂದು ಹೆಸರಿಟ್ಟಿದ್ದಾರೆ. ತಮ್ಮ ಚೊಚ್ಚಿಲ ನಿರ್ದೇಶನದ ಸಿನಿಮಾವನ್ನು ಇದೇ ಸಂಸ್ಥೆಯಿಂದ ಪರಿಚಯಿಸುತ್ತಿದ್ದು, ಈ ಕುರಿತು 'ಸುಧಾ'ದೊಂದಿಗೆ ಅವರು ಮಾತನಾಡಿದ್ದಾರೆ.

◆ 'ಶಾಕುಂತಲೆ ಸಿನಿಮಾಸ್' ಹಿನ್ನೆಲೆ ತಿಳಿಸಿ...

ಸಿನಿಮಾ ನಿರ್ದೇಶಿಸಬೇಕೆಂಬ ಆಲೋಚನೆ ನನ್ನಲ್ಲಿ ಈ ಮೊದಲೇ ಇತ್ತು. ಇದು ನನ್ನ ಕನಸಿನ ಪ್ರಾಜೆಕ್ಟ್. ಸಿನಿಮಾ ಕಥೆ ಮಾಡುತ್ತಾ ಇದನ್ನು ನಾನೇ ನಿರ್ಮಾಣ ಮಾಡಿದರೆ ಹೇಗೆ ಎಂಬ ಯೋಚನೆ ಮೂಡಿತು. ಈ ಸಿನಿಮಾ ನಿರ್ಮಾಣ ಜವಾಬ್ದಾರಿ ನನ್ನದೇ ಆದರೆ ನನಗೆ ಸಂಪೂರ್ಣ ಕ್ರಿಯಾಶೀಲ ಸ್ವಾತಂತ್ರ್ಯ ಇರುತ್ತದೆ, ಯಾವ ರೀತಿ ಸಿನಿಮಾ ಮಾಡಬೇಕು ಅಂದುಕೊಂಡಿದ್ದೀನೋ ಆ ರೀತಿ ಈ ಸಿನಿಮಾ ತರಬಹುದು ಎನಿಸಿತು.

'ಶಾಕುಂತಲೆ ಸಿನಿಮಾಸ್' ಹೆಸರಿಡಲು ಒಂದು ಕಾರಣವಿದೆ. ನಾನು ಎಲ್ಲೇ ಹೋದರೂ ಜನ ಪ್ರೀತಿಯಿಂದ ನನ್ನನ್ನು ಶಾಕುಂತಲೆ ಎಂದೇ ಕರೆಯುತ್ತಾರೆ. ಅವರ ಗೌರವಕ್ಕೆ ಪ್ರತಿಯಾಗಿ ನಿರ್ಮಾಣ ಸಂಸ್ಥೆಗೂ ಅದೇ ಹೆಸರಿಟ್ಟೆ. ನನಗೆ ಹಾಗೂ ನನ್ನ ಕುಟುಂಬದವರಿಗೆ ಈ ಹೆಸರು ಬಹಳ ಇಷ್ಟವಾಯಿತು, ಲೋಗೊದಲ್ಲಿಯೂ ನನ್ನತನ ಬಿಂಬಿತವಾಗಿದೆ. ಲೋಗೊ ಮಾತ್ರವಲ್ಲ, 'ಶಾಕುಂತಲೆ ಸಿನಿಮಾಸ್'ನಿಂದ ನಿರ್ಮಾಣ ಮಾಡುವ ಸಿನಿಮಾಗಳು ಕೂಡ ಉತ್ತಮವಾಗಿರಲಿವೆ.

◆ ನಿಮ್ಮ ಹೊಸ ಬ್ಯಾನರ್‌ನಿಂದ ಯಾವ ರೀತಿ ಸಿನಿಮಾಗಳನ್ನು ಜನರು ನಿರೀಕ್ಷಿಸಬಹುದು?

ಮನಮುಟ್ಟುವಂಥ ಕಥೆಗಳನ್ನು ನೀಡಬೇಕು ಎಂಬ ಉದ್ದೇಶವಿದೆ. ಕೆಲವು ಸಿನಿಮಾಗಳನ್ನು ನೋಡುತ್ತಾ, ನಾನೂ ಈ ರೀತಿಯ ಸಿನಿಮಾಗಳನ್ನು ಮಾಡಬೇಕು ಅನಿಸುತ್ತಿತ್ತು. ಹಾಗೆ ಪ್ರಭಾವ ಬೀರುವಂತಹ ಕಥೆಗಳನ್ನು ನೀಡಬೇಕೆಂದಿದ್ದೇನೆ. ಅನನ್ಯ ಶೈಲಿಯ ಫಿಲ್ಮ್ ಮೇಕಿಂಗ್, ನಿರೂಪಣೆ ಇವು ಮುಖ್ಯವಾಗಿರುವಂಥ ಸಿನಿಮಾಗಳಿಗೆ ಆದ್ಯತೆ. ಸ್ವತಂತ್ರ ಫಿಲ್ಮ್ ಮೇಕರ್‌ಗಳಿಗೆ ಬೆಂಬಲ ನೀಡುವ ಗುರಿಯಿದೆ.

◆ ನಿಮ್ಮ ಚೊಚ್ಚಿಲ ನಿರ್ದೇಶನದ ಸಿನಿಮಾದ ಬಗ್ಗೆ...

ಸಿನಿಮಾ ಕಥೆಯನ್ನು ನಾನೇ ಬರೆದಿದ್ದೇನೆ. ನಾನೇ ನಟಿಸುತ್ತಿದ್ದೇನೆ ಕೂಡ. ಒಂದು ಟಿಪಿಕಲ್ ಹೀರೊ–ಹೀರೋಯಿನ್ ಇರುವ ಸಿನಿಮಾ ಅಲ್ಲ, ಪ್ರತಿಯೊಂದು ಪಾತ್ರ ಕೂಡ ಚೆನ್ನಾಗಿದೆ. ಒಳ್ಳೆಯ ತಂಡ ಸೇರಿ ಸಿನಿಮಾ ರೂಪಿತವಾಗಿದೆ.

◆ ನಟಿಯಾಗಿರುವುದು ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಯಾವ ರೀತಿ ಪೂರಕವಾಯಿತು?

ಒಬ್ಬ ಮಹಿಳೆ ಮಹಿಳಾ ಪಾತ್ರವನ್ನು ಬರೆಯುವುದಕ್ಕೂ ಪುರುಷ ಬರೆಯುವುದಕ್ಕೂ ವ್ಯತ್ಯಾಸವಿರುತ್ತದೆ. ನನಗೆ ಅದು ಯಾವಾಗಲೂ ಮುಖ್ಯ ಅನ್ನಿಸುತ್ತದೆ. ನಾನು ಸಿನಿಮಾದಲ್ಲಿ ನಟಿಸುವಾಗಲೂ, ನಾನು ಹೇಗೆ ಕಾಣಿಸಿಕೊಳ್ಳಬೇಕು, ಯಾವ ರೀತಿ ಪಾತ್ರಗಳನ್ನು ಮಾಡಬೇಕು ಎಂದು ಆಲೋಚಿಸಿಯೇ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಅದೇ ರೀತಿ ಕಥೆ ಬರೆಯುವಾಗಲೂ ಆ ದೃಷ್ಟಿಕೋನ ಇರುತ್ತದೆ. ನಿರ್ಮಾಣ ಮಾಡುವಾಗಲೂ ಕಥಾ ನಿರೂಪಣಾ ಶೈಲಿ, ಪಾತ್ರ ನಿರೂಪಣೆಯನ್ನೇ ಪರಿಗಣಿಸುತ್ತೇನೆ. ನಟಿಯಾಗಿರುವುದು ಸಿನಿಮಾದ ಆಳ ಅಗಲಗಳನ್ನು ಅರಿತು ನಿರ್ಮಾಣ ಸಂಸ್ಥೆ ಆರಂಭಿಸಲು ಪ್ರೇರಣೆಯಾಯಿತು.

◆ ಮಹಿಳಾಕೇಂದ್ರಿತ ಸಿನಿಮಾಗಳನ್ನು ನಿಮ್ಮ ಸಂಸ್ಥೆಯಿಂದ ನಿರೀಕ್ಷಿಸಬಹುದೇ...

ಸಿನಿಮಾವನ್ನು ಮಹಿಳಾಕೇಂದ್ರಿತ ಎಂದು ವಿಭಜನೆ ಮಾಡುವುದು ನನಗೆ ಇಷ್ಟವಿಲ್ಲ. ಒಂದು ಹೀರೊ ಸಿನಿಮಾ ಬಂದರೆ ಅದನ್ನು 'ಮೇಲ್ ಸೆಂಟ್ರಿಕ್' ಎನ್ನುವುದಿಲ್ಲ. ಅದನ್ನು ಬರೀ ಸಿನಿಮಾ ಎನ್ನುತ್ತೇವೆ. ಆದರೆ ಮಹಿಳೆ ನಾಯಕಿ ಆದ ತಕ್ಷಣ ಅದಕ್ಕೆ 'ಮಹಿಳಾ ಪ್ರಧಾನ' ಎಂದು ಹಣೆಪಟ್ಟಿ ಹಚ್ಚುತ್ತೇವೆ. ಆ ಮೂಲಕ ನಾವೇ ಅದನ್ನು ಒಂದು ವಿಭಾಗ ಮಾಡಿಬಿಡುತ್ತೇವೆ. ಸಿನಿಮಾ, ಸಿನಿಮಾ ಅಷ್ಟೇ ಆಗಿರಬೇಕು ಎನ್ನುವುದು ನನ್ನ ಅಭಿಪ್ರಾಯ. ಮಹಿಳೆಯರು ಮುಖ್ಯಪಾತ್ರದಲ್ಲಿ ನಟಿಸುವುದು ಕೂಡ ಮಹಿಳಾಪ್ರಧಾನ ಆಗಿರದೆ ಸಿನಿಮಾ ಎಂದೇ ಪರಿಗಣಿತವಾಗಬೇಕು. ಟ್ಯಾಗ್ ಮಾಡಿ ನೋಡುವ ಅಗತ್ಯವಿಲ್ಲ. ಈ ನಿಟ್ಟಿನಲ್ಲಿ ನನ್ನ ಸಂಸ್ಥೆಯಿಂದಲೂ ಪ್ರಯತ್ನಗಳು ನಡೆಯುತ್ತವೆ. ■